**ಸಿ.ಸಿ. ನಂಬರಃ 850/2023**

**ಸಾಕ್ಷಿಃ ಪಿ. ಡಬ್ಲ್ಯೂಃ 1**

**(ಇಂದು ತಾಃ 31-01-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಜಿ.ಎನ್. ವಕೀಲರಿಂದ,**

ನಾನು ಅಟೋ ಮೊಬೈಲ್ ವ್ಯವಹಾರವನ್ನು ಭಟ್ಕಳದಲ್ಲಿ ಮಾಡುತ್ತಿದ್ದೇನೆ. ಆ ರೀತಿ ಸುಮಾರು 15 ವರ್ಷಗಳಿಂದ ವ್ಯವಹಾರವನ್ನು ಮಾಡುತ್ತಿದ್ದೇನೆ. ಆರೋಪಿ ಸುಮಾರು 10 ವರ್ಷಗಳಿಂದ ಪರಿಚಿತರು. ಆರೋಪಿ ನನ್ನ ಸ್ನೇಹಿತನಾಗಿರುತ್ತಾನೆ. ದೂರಿನಲ್ಲಿ ಹೇಳಿದ ಮೊತ್ತವನ್ನು ಆರೋಪಿಗೆ ನನ್ನ ಶೋರೂಂ ಬಳಿ ನೀಡಿರುತ್ತೇನೆ. ನನ್ನ ಶೋರೂಂ ನಲ್ಲಿ ಈಗ ಸಿ.ಸಿ. ಕ್ಯಾಮೆರಾ ಇರುತ್ತದೆ, ಮೊದಲು ಇರಲಿಲ್ಲ. ನಾನು ಆರೋಪಿಗೆ ಹಣ ನೀಡುವಾಗ ನನ್ನ ಸ್ನೇಹಿತನಾದ ಮೊಹಮ್ಮದ್ ಸಮೀ ಎಂಬುವವರು ಹಾಜರಿದ್ದರು. ನಾನು ದಿನಾಂಕಃ 25-10-2022 ರಂದು ಆರೋಪಿಗೆ ಹಣ ನೀಡಿರುತ್ತೇನೆ. ಆರೋಪಿಗೆ ಹಣ ನೀಡುವಾಗ ಆರೋಪಿ, ನಾನು ಹಾಗೂ ನನ್ನ ಸ್ನೇಹಿತ ಮೊಹಮ್ಮದ್ ಸಮೀ ಮಾತ್ರ ಇದ್ದೆವು, ಬೇರೆ ಯಾರೂ ಇರಲಿಲ್ಲ. ಆರೋಪಿ ನನ್ನ ಬಳಿ ವೈಯಕ್ತಿಕ ಕೆಲಸಕ್ಕಾಗಿ ಹಣ ಕೇಳಿರುತ್ತಾರೆ. ಆರೋಪಿ ನನ್ನ ಬಳಿ ವ್ಯವಹಾರ ಮಾಡುತ್ತಿದ್ದೇನೆ ಎಂದು ಹೇಳುತ್ತಿದ್ದರು, ಏನು ವ್ಯವಹಾರ ಎಂದು ಗೊತ್ತಿಲ್ಲ. ನಾನು ಆರೋಪಿಗೆ ಹಣ ನೀಡುವಾಗ ನಿರ್ದಿಷ್ಠವಾಗಿ ಆರೋಪಿ ಏನು ಕೆಲಸ ಮಾಡುತ್ತಿದ್ದಾನೆಂದು ನಾನು ಕೇಳಿರುವುದಿಲ್ಲ.

2. ಆರೋಪಿಯು 3 ತಿಂಗಳಲ್ಲಿ ಹಣ ವಾಪಸ್ಸು ಕೊಡುತ್ತೇನೆಂದು ಹೇಳಿದ್ದರು. ದಿನಾಂಕಃ 30-01-2023 ರಂದು ಆರೋಪಿ ಚೆಕ್ಕು ನನಗೆ ನೀಡಿರುತ್ತಾರೆ. ದೂರನ್ನು ತಯಾರಿಸಲು ವಕೀಲರಿಗೆ ನಾನು ಮಾಹಿತಿ ನೀಡಿರುತ್ತೇನೆ. ನಾನು ಆರೋಪಿಗೆ ಹಣ ನೀಡಿದಾಗ ಯಾವುದೇ ದಾಖಲಾತಿಗಳನ್ನು ಬರೆಸಿಕೊಂಡಿರುವುದಿಲ್ಲ. ನನ್ನ ದೂರಿನಲ್ಲಿ ದಾಖಲಾತಿಗಳನ್ನು ಆರೋಪಿ ಬರೆದುಕೊಟ್ಟು, ಹಣ ಪಡೆದಿದ್ದಾರೆಂದು ಹೇಳಿರುವುದು ಸರಿಯಾ ಎಂದರೆ, ಸಾಕ್ಷಿಯು ಬರೆದಿರುವುದು ಸರಿ ಇರುತ್ತದೆ, ಆರೋಪಿ ಚೆಕ್ಕು ನೀಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಹಣ ನೀಡಿದ ದಿನಾಂಕದಂದು ಆರೋಪಿಯು ಚೆಕ್ಕು ನೀಡಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**